**CC 1143/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 1143/2017**

**ಸಿ ಡಬ್ಲ್ಯೂ 15**
**ಪಿ ಡಬ್ಲ್ಯೂ: 7**

| | |
|---|---|
| **ಸಾಕ್ಷಿಯ ಹೆಸರು -** | **ಲಿಂಗನಗೌಡ** |
| **ತಂದೆಯ ಹೆಸರು -** | **ಬಸವನಗೌಡ** |
| **ವಯಸ್ಸು -** | **46 ವರ್ಷಗಳು** |
| **ಉದ್ಯೋಗ -** | **ವೃತ್ತ ನೀರಿಕ್ಷಕ , ಸಂತೆ ಬೆನ್ನೂರು ವೃತ್ತ ದಾವಣಗೆರೆ** |
| **ವಾಸಸ್ಥಳ -** | **ಸಂತೆ ಬೆನ್ನೂರು** |

**ಸಾಕ್ಷಿಯನ್ನು ದಿನಾಂಕಃ 28-11-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **08-07-2016** ರಿಂದ **29-09-2018** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಆರಕ್ಷಕ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಪ್ರಕರಣದ ಕಡತವನ್ನು ದಿಃ **31-01-2017** ರಂದು ಚಾಸಾ **-22** ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ **-12 , 15** ರಿಂದ **17** ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ **01-02-2017** ರಂದು ಹೊಸಪೇಟೆ ನಗರಸಭೆಯ ಪೌರಾಯುಕರಿಗೆ ಕೃತ್ಯ ಸ್ಥಳದ ದಾಖಲೆಗಳನ್ನು ನೀಡುವಂತೇ ದಾಖಲೆ ಸಲ್ಲಿಸಿರುತ್ತೇನೆ. ಸದರಿ ಮನವಿ ಆದರಿಸಿ ದಿಃ **15-02-2017** ರಂದು ಹೊಸಪೇಟೆಯ ನಗರಸಭೆಯ ಪೌರಾಯುಕ್ತರು ಕತ್ಯ ನಡೆದ ಸ್ಥಳದ ದಾಖಲೆಯನ್ನು ನೀಡಿದ್ದರು. ಸದರಿ ದಾಖಲೆಗಳನ್ನು ಸಾಕ್ಷಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **30** ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿಃ **30(ಎ)** ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸ್ಥಳದ

ಅನುರಾಧ ಎಂಬುವವರ ಹೆಸರಿನಲ್ಲಿ ಇರುವ ಬಗ್ಗೆ ನಿಪಿಃ 30 ರಲ್ಲಿ ನಮೂದಿಸಲಾಗಿತ್ತು.

ದಿಃ 20-02-2017 ರಂದು ಬೆಳಿಗ್ಗೆ 10.00 ಗಂಟೆಗೆ ಸಿಬ್ಬಂದಿಗಳಾದ ಚಾಸಾ - 23 ರಿಂದ 29 ರವರು ನಮ್ಮ ಇಲಾಖಾ ಜೀಪ್ ಮತ್ತು ಸಿಬ್ಬಂದಿಗಳ ಮೋಟಾರ್ ಸೈಕಲು ಗಳಲ್ಲಿ ಗಸ್ತು ತಿರುಗುತ್ತಿದ್ದಾಗ ಬೆಳಿಗ್ಗೆ 10.30 ಗಂಟೆಗೆ ಕೆ. ಎಸ್. ಆರ್. ಟಿ.ಸಿ ಬಸ್ ಡಿಪೋ ಹತ್ತಿರ ಇಬ್ಬರು ವ್ಯಕ್ತಿಗಳು ನಮ್ಮನ್ನು ನೋಡಿ ಒಡಿ ಹೋಗಲು ಪ್ರಯತ್ನಿಸಿದರು. ಸಿಬ್ಬಂದಿಗಳ ಸಹಾಯದಿಂದ ಒಬ್ಬ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ತನ್ನ ಹೆಸರು ಮೊಹಮದ್ ರಶೀದ್ ತಂದೆ ಮೊಹಮದ್ ಇಸ್ಮಾಯಿಲ್, ವಯಸ್ಸು 42 ವರ್ಷ, ಮೆಕಾನಿಕ್ ಕೆಲಸ, ಸ್ವಂತ ಊರು ಸಿಂಧನೂರು, ಹಾಲಿ ಸಿರಸಿನಕಲ್ಲು ಹೊಸಪೇಟ ಎಂದು ತಿಳಿಸಿದ . ಒಡಿಹೋದ ವ್ಯಕ್ತಿ ಮಂಜುನಾಥ ಎಂದು ತಿಳಿಸಿದ . ಸದರಿ ಸಿಕ್ಕಿಬಿದ್ದ ಆಸಾಮಿ ಈ ಪ್ರಕರಣದ ಆರೋಪಿ ಎಂಬುದು ದೃಢಪಟ್ಟಿದ್ದರಿಂದ ಠಾಣೆಗೆ ಕರೆದುಕೊಂಡು ಬಂದು ಆತನನ್ನು ವಿಚಾರಿಸಿ ಸ್ವಮುಷಿ ಹೇಳಿಕೆಯನ್ನು ಪಡೆದಿರುತ್ತೇನೆ. ತನ್ನ ಸ್ವಖುಷಿ ಹೇಳಿಕೆಯಲ್ಲಿ ಪ್ರಕರಣದ 1, 3 ಮತ್ತು 4 ನೇ ಆರೋಪಿತರೊಂದಿಗೆ ಸೇರಿ ದಿಃ 14-01-2017 ರಂದು ಮಧ್ಯಾಹ್ನ 1.00 ಗಂಟೆಗೆ ಚಾಸಾ -1 ಮತ್ತು ಆಕೆಯ ಕುಟುಂಬದವರು ಮನೆಯಲ್ಲಿ ಇಲ್ಲದ್ದನ್ನು ನೋಡಿಕೊಂಡು ರಾಧಾಕೃಷ್ಣ ಆಟೋ ಮೊಬೈಲ್ ಅಂಗಡಿಗೆ ಹಾಕಿದ್ದ ಭೀಗವನ್ನು 1 ನೇ ಆರೋಪಿ ರಾಡಿನಿಂದ ಮುರಿದು, ಟಾಟಾ ಎಸ್ ನಂಬರ್ ಕೆಎ 35 ಎ 8710 ವಾಹನದಲ್ಲಿ ಆಟೋ ಮೊಬೈಲ್ ಸಾಮಾನುಗಳನ್ನು ಮತ್ತು ಲಾರಿಯ ಬಿಡಿ ಭಾಗಗನ್ನು ಕಳ್ಳತನ ಮಾಡಿಕೊಂಡು ಮೊದಲನೇ ಲೋಡ್ ಅನ್ನು 1 , 3 ಮತ್ತು 4 ನೇ ಆರೋಪಿತರು ಸಾಗಿಸದ್ದು, 2 ನೇ ಆರೋಪಿ ಸದ್ದಳದಲ್ಲೇ ಇದ ಬಗ್ಗೆ ತಿಳಿಸಿದ. 1 ನೇ ಲೋಡ್ ನಲ್ಲಿ ಹೋದ ಕಳ್ಳತನವಾದ ವಸ್ತುಗಳು ಎಲ್ಲಿವೆ ಎಂದು 1 , 3 ಮತ್ತು 4 ನೇ ಆರೋೇಪಿತರಿಗೆ

ಗೊತ್ತು ಎಂದು ತಿಳಿಸಿದ. ಅದೇ ಟಾಟಾ ಎಸ್ ನಲ್ಲಿ 2 ನೇ ಲೋಡ್ ನಲ್ಲಿ 4 ಜನ ಆರೋಪಿತರು ಸೇರಿ ಇನ್ನೂ ಕೆಲವು ವಸ್ತುಗಳನ್ನು ಕಳ್ಳತನ ಮಾಡಿ ಅವುಗಳನ್ನು ಮಾರಿ ದುಡ್ಡು ಹಂಚಿಕೊಳ್ಳೋಣ ಎಂದು ತಿರ್ಮಾನಿಸಿ 4 ನೇ ಆರೋಪಿ ಬಾಡಿಗೆಗೆ ಇದ್ದ ಜೆಪಿ ನಗರದ ಮನೆಯಲ್ಲಿ ಇಟ್ಟು, 3 ಕೀಲಿಗಳಿರುವ ಭೀಗವನ್ನು ಹಾಕಿ 1, 2 ಮತ್ತು 4 ನೇ ಆರೋಪಿತರು ತಲಾ ಒಂದು ಕೀಲಿಯನ್ನು ಇಟ್ಟಿರುವುದಾಗಿ ತಿಳಿಸಿದ. ಕೃತ್ಯಕ್ಕೆ ಬಳಸಿದ ವಾಹನವನ್ನು ಜೆಪಿ ನಗರದ ಅಪನಾಕಾರ್ ಅಪನಾಪೈಸಾ ಎಂಬ ಹೆಸರಿನ ಅಂಗಡಿಯಲ್ಲಿ ಇಟ್ಟಿರುವುದಾಗಿ ತಿಳಿಸಿದ . ಸದರಿ ಆರೋಪಿ ತನ್ನನ್ನು ಕರೆದುಕೊಂಡು ಹೋದರೆ ಕಳ್ಳತನ ಮಾಡಿದ ಸ್ಥಳ ಮತ್ತು ಕಳ್ಳತನ ಮಾಡಿದ್ದ ವಸ್ತುಗಳನ್ನು ತೋರಿಸುವುದಾಗಿ ತಿಳಿಸಿದ್ದ. ಸದರಿ ಹೇಳಿಕೆಯ ಭಾಗವನ್ನು ನಿಪಿಃ 31 ಎಂದು ಗುರುತಿಸಲಾಯಿತು.

ಸದರಿ ಆರೋಪಿಯ ಸ್ವಇಚ್ಛೆ ಹೇಳಿಕೆ ಆಧಾರದ ಮೇಲೆ ಚಾಸಾ 4 ಮತ್ತು 5 ರವರನ್ನು ಠಾಣೆಗೆ ಕರೆಸಿಕೊಂಡೆವು. ಸದರಿ ಪಂಚರಿಗೆ ಪ್ರಕರಣದ ವಿಷಯ ತಿಳಿಸಿ 2 ನೇ ಆರೋಪಿಯನ್ನು ತೋರಿಸಿರುತ್ತೇನೆ. ಸದರಿ ಆರೋಪಿ ನಮ್ಮನ್ನು ಜೆಪಿ ನಗರದ ಅಪನಾಕಾರ್ ಅಪನಾಪೈಸಾ ಅಂಗಡಿಗೆ ಕರೆದುಕೊಂಡು ಹೋಗಿ ಬಚ್ಚಿಟ್ಟಿದ್ದ ಟಾಟಾಎಸ್ ಸಂಖ್ಯೆ ಕೆಎ 35 ಎ 8710 ವಾಹನವನ್ನು ತೋರಿಸಿದ. ಸದರಿ ಟಾಟಾಎಸ್ ಅನ್ನು ಪಂಚರ ಸಮಕ್ಷಮ ಮದ್ಯಾಹ್ನ 12.30 ರಿಂದ 1.00 ಗಂಟೆಯ ವರೆಗೆ ಜಪ್ತು ಪಂಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಅದೇ ವಾಹನವನ್ನು ತೆಗೆದುಕೊಂಡು ಆರೋಪಿ ಕೆಲವು ವಸ್ತುಗಳನ್ನು ಇಟ್ಟಿರುವ ಜಾಗ 4 ನೇ ಆರೋಪಿಯ ಬಾಡಿಗೆ ಮನೆಗೆ ಕರೆದುಕೂಂಡು ಹೋಗಿರುತ್ತಾನೆ. ಸದರಿ ಸ್ಥಳದಲ್ಲಿ ಒಂದು ಸಿಮೆಂಟ್ ಬಣ್ಣದ ಗಾಡ್ರೇಜ್, ಒಂದು ಸಿಮೆಂಟ್ ಬಳ್ಳದ ಫ್ರಿಜ್ , ಸಿಂಫನಿ ಕಂಪನಿಯ ಎರ್ ಕೂಲರ್, ವಿಡಿಯೋ ಕಂಪನಿಯ ರೆಫ್ರಿಜರೆಟರ್ ಮತ್ತು ಬಂಗಾರದ ಬಣ್ಣದ ಬೀಗ ಮತ್ತು ಕೀಲಿ ಜಪ್ತು ಪಡಿಸಿಕೊಂಡಿರುತ್ತೇನೆ. ಸದರಿ

ಪಂಚನಾಮೆಯನ್ನು ಮದ್ಯಾಹ್ನ 1.15 ರಿಂದ 2.00 ಗಂಟೆಯ ವರೆಗೆ ಮಾಡಿರುತ್ತೇನೆ. ಜಪ್ತು ಪಡಿಸಿಕೊಂಡಿದ್ದ ಮಾಲನ್ನು ಠಾಣೆಯ ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 32 ಎಂದು, ಕೊನೆಯ ಪುಟದಲ್ಲಿನ ಸಾಕ್ಷಿಯ ಸಹಿಯನ್ನು ನಿಪಿಃ 32(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿಃ 7, 8, 27 ಎಂದು ಗುರುತಿಸಲಾಗಿದೆ.

ಕೃತ್ಯ ನಡೆದ ಸ್ಥಳವನ್ನು ಆರೋಪಿ ತೋರಿಸುವುದಾಗಿ ತಿಳಿಸಿದ್ದರಿಂದ ಚಾಸಾ -10 ಮತ್ತು 11 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ 25 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ 25(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ 26 ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಚಾಸಾ -1 ರವರ ಮರುಹೇಳಿಕೆ ಮತ್ತು ಚಾಸಾ -18 ರಿಂದ 20, 23 ರಿಂದ 29 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ 2 ನೇ ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ನೀಡಿರುತ್ತೇನೆ.

ದಿಃ 23-04-2017 ರಂದು 1 ನೇ ಆರೋಪಿಯು ಉಚ್ಚ ನ್ಯಾಯಾಲಯದಿಂದ ನೀರಿಕ್ಷಣಾ ಜಾಮಿನನ್ನು ಪಡೆದು ಹಾಜರಾದಾಗ ಆತನನ್ನು ವಿಚಾರಿಸಿ ದಸ್ತಗಿರಿ ಮಾಡಿ ಸ್ವ ಇಚ್ಚಾ ಹೇಳಿಕೆಯನ್ನು ಪಡೆದಿರುತ್ತೇನೆ. ಸ್ವ ಇಚ್ಚಾ ಹೇಳಿಕೆಯಲ್ಲಿ ತಾನು ಮೇಲೆ ಹೇಳಿದ ದಿನದಂದು ಇತರೆ 3 ಜನ ಆರೋಪಿತರೊಂದಿಗೆ ಚಾಸಾ -1 ರವರ ಆಟೋಮೊಬೈಲ್ ಅಂಗಡಿಯಲ್ಲಿ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾನೆ. ಸದರಿ ಆರೋಪಿ ಕಳ್ಳತನ ಮಾಡಿದ್ದ ಸದ ವಸ್ತುಗಳನ್ನು ಇಟ್ಟಿದ್ದ ಮನೆಯ ಒಂದು ಕೀಲಿಯನ್ನು ಹಾಜರುಪಡಿಸಿದ್ದ. ಸದರಿ ಕೀಲಿಯನ್ನು ಚಾಸಾ -6 ಮತ್ತ 7 ರವರ

ಸಮಕ್ಷಮ ಮಧ್ಯಾಹ್ನ 1.15 ರಂದ 2.00 ಗಂಟೆಯ ವರೆಗೆ ಪಂಚನಾಮೆ ಕ್ರಮ ಜರುಗಿಸಿ ವಶಕ್ಕೆ ಪಡೆದಿರುತ್ತೇನೆ . ಸಾಕ್ಷಿ ನಿಪಿಃ 22 ರ ಪಂಚನಾಮೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು 22 (ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಟೋ ತೆಗೆಯಲಾಗಿತ್ತು. ಸಾಕ್ಷಿ ನಿಪಿಃ 9 ರ ಪೋಟೋ ನೋಡಿ ಗುರುತಿಸಿರುತ್ತಾರೆ. ಅದೇ ದಿಂನ ಚಾಸಾ -14 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 28-04-2017 ರಂದು ಚಾಸಾ -13 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 17-05-2017 ರಂದು 3 ನೇ ಆರೋಪಿ ಉಚ್ಚ ನ್ಯಾಯಾಲಯದಿಂದ ನೀರಿಕ್ಷಣಾ ಜಾಮೀನನ್ನು ಪಡೆದು ಹಾಜರಾದಾಗ ಆತನನ್ನು ವಿಚಾರಿಸಿ ಸ್ವಇಚ್ಚಾ ಹೇಳಿಕೆ ಪಡೆದಿರುತ್ತೇನೆ. ಸದರಿ ವ್ಯಕ್ತಿ ತನ್ನ ಹೇಳಿಕೆಯಲ್ಲಿ ಕಳ್ಳತನ ಮಾಡಿದ್ದ ವಸ್ತುಗಳನ್ನು ಜಂಬುನಾಥ ರಸ್ತೆಯಲ್ಲಿನ ಒಂದು ಮನೆಯಲ್ಲಿ ಇಟ್ಟಿರುವುದಾಗಿ ಮತ್ತು ಆತನನ್ನು ಕರೆದುಕೊಂಡು ಹೋದರೆ ತೋರಿಸುವುದಾಗಿ ತಿಳಿಸಿದ. ಸದರಿ ಕಳ್ಳತನವನ್ನು ತಾವೆಲ್ಲರೂ ಸೇರಿ ಮಾಡಿರುವುದಾಗಿ ಒಪ್ಪಿಕೊಂಡಿದ್ದ. ಸದರಿ ಹೇಳಿಕೆಯ ಭಾಗವನ್ನು ನಿಪಿಃ 33 ಎಂದು ಗುರುತಿಸಲಾಯಿತು.

ಹೇಳಿಕೆ ಆಧಾರದ ಮೇಲೆ ಪಂಚರಾದ ಚಾಸಾ -8 ಮತ್ತು 9 ರವರನ್ನು ಠಾಣೆಗೆ ಬರಮಾಡಿಕೊಂಡು ವಿಚಾರ ತಿಳಿಸಿ, ಆರೋಪಿ ಕರೆದುಕೊಂಡ ಹೋದ ಜಂಬುನಾಥ ರಸ್ತೆಯಲ್ಲಿನ ಮನೆಗೆ ಹೋದೆವು. ಸದರಿ ಮನೆಯಲ್ಲಿ ಆರೋಪಿ ತೋರಿಸಿದ 10 ವಸ್ತುಗಳನ್ನು ನಿಪಿಃ 23 ರಂತೆ ಪಂಚನಾಮೆ ಮಾಡಿ ಜಪ್ತು ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿಃ 23(ಇ) ಎಂದು ಗುರುತಿಸಲಾಯಿತು. ಸದರಿ ಮುದ್ದೆ ಮಾಲುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಸಾಕ್ಷಿ ನಿಪಿಃ 10 ರಿಂದ 13 ರಲ್ಲಿನ ಪೋಟೋ ನೋಡಿ ಗುರುತಿಸಿರುತ್ತಾರೆ. ಚಾಸಾ -1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

**CC 1143/2017**

ದಿಃ **18-05-2017** ರಂದು **4** ನೇ ಆರೋಪಿ ಉಚ್ಚ ನ್ಯಾಯಾಲಯಲದಿಂದ ನೀರಿಕ್ಷಣಾ ಜಾಮೀನು ಪಡೆದು ಜಹಾಜಾರಾದಾಗ ಆತನನ್ನು ವಿಚಾರಿಸಿ ಸ್ವಇಚ್ಚಾ ಹೇಳಿಕೆಯನ್ನು ಪಡೆದಿರುತ್ತೇನೆ. ಸದರಿ ವ್ಯಕ್ತಿ ಮೇಲೆ ಹೇಳಿದ ಕಳ್ಳತನದ ವಿಚಾರವಾಗಿ ಮಾಹಿತಿಯನ್ನು ತನ್ನ ಹೇಳಿಕೆಯಲ್ಲಿ ನೀಡಿರುತ್ತಾನೆ. ಸದರಿ ಆರೋಪಿ ಆತನ ಕಳ್ಳತನ ಮಾಡಿದ್ದ ವಸ್ತುಗಳನ್ನು ಇಟ್ಟ ಮನೆಗೆ ಹಾಕಿದ್ದ ಕೀಲಿಯನ್ನು ಹಾಜರುಪಡಿಸಿದ್ದ. ಸದರಿ ಕೀಲಿಯನ್ನು ಚಾಸಾ **-8** ಮತ್ತು **9** ರವರ ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿ ನಿಪಿಃ **24** ರ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ **24** **(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ **14** ರ ಪೋಟೋ ನೋಡಿ ಗುರುತಿಸಿರುತ್ತಾರೆ. ಸದರಿ ಮುದ್ದೆ ಮಾಲನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ.

ದಿಃ **06-06-2017** ರಂದು ಆರೋಪ ಸಾಭಿತಾಗಿದ್ದರಿಂದ ಆರೊಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲಿಗಾಗಿ ಮಧ್ಯಾಹ್ನ **3.00** ಗಂಟೆಗೆ ಮುಂದುಡಲಾಯಿತು.

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆಜಿಪಿಆರ್ ವಕೀಲರಿಂದ**

ದೂರು ನೀಡಿದವರ ಹೆಸರು ಸುಗುಣ ಎಂದು ಇರುತ್ತದೆ. ದೂರನ್ನು ನಾನು ಸಂಪೂರ್ಣವಾಗಿ ಒದಿರುತ್ತೇನೆ. ಘಟನೆ ಆಗಿದೆ ಎನ್ನಲಾದ ಸ್ಥಳ ಪಿರ್ಯಾದುದಾರರ ತಾಯಿಯ ಹೆಸರಿನಲ್ಲಿ ಇದೆ ಎಂದು ದಾಖಲೆ ಪಡೆದಿರುತ್ತೇನೆ. ನಾನು ನಿಪಿಃ 30 ರ ದಾಖಲೆಯನ್ನು ಹೊರತುಪಡಿಸಿ ಬೇರಾವುದೇ ದಾಖಲೆಯನ್ನು ಪಿರ್ಯಾದುದಾರರಿಂದ ಪಡೆದು ಪರಿಶೀಲಿಸಿಲ್ಲ. ನಿಪಿಃ 30 ರ ಆಧಾರದ ಮೇಲೆಯೇ ಪಿರ್ಯಾದುದಾರರು ಮಾಲಿಕರು ಎಂದು ನಾನು ತೀರ್ಮಾನಿಸಿರಲಿಲ್ಲ. ಸಾಕ್ಷಿ ಮುಂದುವರೆದು ಅವರು ಸ್ವಾಧೀನಾನುಭವದಲ್ಲಿ ಇದ್ದರು ಎಂದು ನುಡಿಯುತ್ತಾರೆ. ನಗರ ಸಭೆಯ ಪೌರಾಯುಕ್ತರಿಗೆ ಆಸ್ತಿಗೆ ಸಂಬಂಧಿಸಿ ದಾಖಲೆಗಳನ್ನು ಕೊಡಿ ಎಂದು ಸಲ್ಲಿಸಿದ್ದ ಮನವಿಯ ಸ್ವೀಕೃತ ನಕಲನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿರುವುದಿಲ್ಲ. ನಾನು ಸದರಿ ಮನವಿಯಲ್ಲಿ ಆಸಿರ್ಯನ್ನು 1 ನೇ ಆರೋಪಿ ಮತ್ತು ಪಿರ್ಯಾದುದಾರರು ತಮ್ಮ ಮಾಲೀಕತ್ವದ್ದು ಎಂದು ಹೇಳುತ್ತಿರುವುದರಿಂದ ಅದು ಯಾರಿಗೆ ಸಂಬಂಧಿಸಿದ್ದು ಎಂದು ಪುರಸಭೆಯಲ್ಲಿರುವ ದಾಖಲೆಗಳನ್ನು ಒದಗಿಸುವಂತೆ ಬರೆದಿದ್ದೆ. ಉಭಯಪಕ್ಷಗಾರರು ಒಂದೇ ಆಸ್ತಿ ಅಂದರೆ ಡೋರ್ ನಂಬರ್ 1148 ಆಸ್ತಿಯನ್ನು ತಮ್ಮದು ಎಂದು ಪ್ರತಿಪಾದಿಸುತ್ತಿದ್ದರು. ನಾನು ಎಂ.ಎಸ್.ಸಿ ಅಗ್ರಿ ಪದವಿಧರನಿರುತ್ತೇನೆ. ನನಗೆ ಸಿವಿಲ್ ವ್ಯಾಜ್ಯಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವಷ್ಟು ಆಳವಾದ ಜ್ಞಾನ ಇಲ್ಲ.

ನಿಪಿಃ 30 ರ ದಾಖಲೆಯನ್ನು ಅಂತಿಮ ವರದಿ ಸಲ್ಲಿಸುವುದಕ್ಕೂ ಮೊದಲು ಒದಿರುತ್ತೇನೆ. ಸದರಿ ದಖಲೆಯಲ್ಲಿ ಡೋರ್ ನಂ. 26/ಎ ಆಸ್ತಿ 1 ನೇ ಆರೋಪಿ ಹೆಸರಿನಲ್ಲಿ ಇರುತ್ತದೆ ಎಂದು ಪೌರಾಯುಕ್ತರಿಗೆ ಕರವಸೂಲಿಗಾರರು ವರದಿ ನೀಡಿದ

ಬಗ್ಗೆ ನಮೂದು ಇರುತ್ತದೆ ಅಂದರೆ ಸರಿ . ಪಿರ್ಯಾದುದಾರರು ನೀಡಿರುವ ಆಸಿತಯ ಚೆಕ್ ಬಂದಿ ಮತ್ತು ನಗರಸಭೆಯಲ್ಲಿನ ದಾಖಲೆಗಳಲ್ಲಿನ ಚೆಕ್ ಬಂದಿ ತಾಳೆ ಆಗುತ್ತಿಲ್ಲ ಎಂದು ನಿಪಿಃ 30 ರಲ್ಲಿ ನಮೂದು ಇರುತ್ತದೆ ಅಂದರೆ ಸರಿ . ಪಿರ್ಯಾದುದಾರರು ಸದರಿ ಆಸ್ತಿಗೆ ಸಂಬಂಧಿಸಿದ ಯಾವುದೇ ನೊಂದಾಯಿತ ದಾಖಲೆಯನ್ನು ನಗರಸಭೆಗೆ ದಾಖಲಿ ನೀಃ ಎಂದು ನಮೂದು ಇರುತ್ತದೆ ಅಂದರೆ ಸರಿ . ನಿಪಿಃ 30 ರಲ್ಲಿ ಆರೋಪಿಯ ನೊಂದಾಯಿತ ದಾಖಲೆ ಇರುತ್ತದೆ ಮತ್ತು ಚೆಕ್ ಬಂದಿ ಹೊಂದಾಣಿಕೆ ಆಗುತ್ತದೆ ಎಂದು ನಮೂದು ಆಗಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚೆಕ್ ಬಂದಿ ಹೊಂದುತ್ತಿಲ್ಲ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಆ ಕಾರಣಕ್ಕೆ ನಾನು ಅಂತಿಮ ವರದಿ ಸಲ್ಲಿಸಿಲ್ಲ. ಸಾಕ್ಷಿ ಮುಂದುವರೆದು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿ ಮಾತ್ರ ತನಿಖೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಅಸಲು ದಾವೆ ಸಂಖ್ಯೆ 338/2016 ಎಂಬ ಪ್ರಕರಣ ದಾಖಲಾಗಿರುವ ಬಗ್ಗೆ ದೂರಿನಲ್ಲಿ ನಮೂದು ಇರುತ್ತದೆ ಅಂದರೆ ಸರಿ . ಸದರಿ ದಾವೆಗೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ನಾನು ಪಡೆದು ಪರಿಶೀಲಿಸಿಲ್ಲ. ಸದರಿ ದಾವೆಯನ್ನು 1 ನೇ ಆರೋಪಿಯೇ ಹೂಡಿರುತ್ತಾರೆ ಎಂದು ದೂರು ಒದಿದರೇ ತಿಳಿಯುತ್ತದೆ. ಸದರಿ ದಾವೆ ಯಾವ ಸ್ವತ್ತಿಗೆ ಸಂಬಂಧಿಸಿ ದಾಖಲಾಗಿತ್ತು ಎಂದು ನಾನು ತಿಳಿದುಕೊಂಡಿಲ್ಲ. ನ್ಯಾಯಾಲಯದಲ್ಲಿ ಆಸ್ತಿಗಳಿಗೆ ಸಂಬಂಧಿಸಿ ಯಾವುದಾದರೂ ಆದೇಶಗಳು ಆಗಿರುತ್ತವೆಯೋ ಇಲ್ಲವೋ ಎಂದು ನಾನು ಪರಿಶೀಲಿಸಿಲ್ಲ.

ದೂರಿನಲ್ಲಿ ರೂ. 45,00,000/- ಗಳು ಕಳ್ಳತನ ಆದ ಬಗ್ಗೆ ನಮೂದು ಇದೆ ಅಂದರೆ ಸರಿ . ಸದರಿ ಹಣ ಯಾವ ಬ್ಯಾಂಕಿನಿಂದ ಚಾಸಾ -1 ರವರು ಪಡೆದಿದ್ದರು ಎಂದು ತನಿಖೆ ಮಾಡಿ ಆ ಬ್ಯಾಂಕಿನ ವ್ಯವಸ್ಥಾಪಕರಿಂದ ಹೇಳಿಕೆ ಪಡೆದಿರುತ್ತೇನೆ. ವ್ಯವಸ್ಥಾಪಕರ ಹೇಳಿಕೆಯನ್ನು ಪಡೆದಿರುವುದಿಲ್ಲ ಆದರೆ ಮನವಿ ಕೊಟ್ಟಿದ್ದೆ ಎಂದು

ನುಡಿಯುತ್ತಾರೆ. ದೂರಿನಲ್ಲಿ ರೂ. 45,00,000/- ಬೆಲೆ ಬಾಳುವ ಎನೆಲ್ಲಾ ಸಾಮಾಗ್ರಿಗಳು ಕಳ್ಳತನ ಆಗಿವೆ ಎಂದು ನಮೂದು ಇಲ್ಲ. ಆ ಬಗ್ಗೆ ಯಾವುದೇ ಇನ್ ವೆಂಟರಿಯನ್ನು ನಾನು ಮಾಡಿಲ್ಲ .

ರೂ. 45,00,000/- ಬೆಲೆ ಬಾಳುವ ಸಾಮಾಗ್ರಿಗಳನ್ನು ಚಾಸಾ -1 ರವರು ಖರೀದಿಸಿದ ಬಗ್ಗೆ ಅವರಿಂದ ರಸೀದಿಗಳನ್ನು ಪಡೆದಿರುವುದಿಲ್ಲ. ಕಳ್ಳತನ ಆದ ವಸ್ತುಗಳು ಹೊಸ ಸಾಮಾಗ್ರಿಗಳೋ ಅಥವಾ ಸೆಕೆಂಡ್ ಹ್ಯಾಂಡ್ ಸಾಮಾಗ್ರಿಗಳೋ ಎಂಬುದನ್ನು ನಾನು ಚಾಸಾ -1 ರವರನ್ನು ವಿಚಾರಿಸಿ ತಿಳಿದುಕೊಂಡಿಲ್ಲ. ಯಾವ ಯಾವ ವಸ್ತುಗಳು ಕಳ್ಳತನ ಆಗಿವೆ ಎಂದು ನಿಖರವಾಗಿ ಅವುಗಳ ಹೆಸರುಗಳನ್ನು ಬರೆದು ದೂರನ್ನು ಸಲ್ಲಿಸಿರುವುದಿಲ್ಲ. ದೂರಿನಲ್ಲಿ ಫ್ರಿಜ್, ಅಲ್ಮೇರಾ, ಸಿಂಫನಿ ಎರ್ ಕೂಲರ್ ಕಳ್ಳತನ ಆಗಿದೆ ಎಂದು ನಮೂದು ಇಲ್ಲ ಅಂದರೆ ಸರಿ .

ನಾನು ಕಳ್ಳತನ ಆಗಿದ್ದ ಸಳಕ್ಕೆ ದಿಃ 31-01-2017 ರಂದು ಹೋಗಿರುತ್ತೇನೆ. ನಾನು ಹೋದಾಗ ಸದ್ದಳದಲ್ಲಿ ಯಾವುದೇ ಮುರಿದ ಬೀಗ ಅಥವಾ ಬಾಗಿಲನ್ನು ಜಪ್ತು ಮಾಡಿರುವುದಿಲ್ಲ. ಬೀಗ ಮುರಿದಂ ಬಗ್ಗೆ ತನಿಖೆಯಲ್ಲಿ ಗೊತ್ತಾಗಿರುತ್ತದೆ. ನನಗಿಂತಲೂ ಮೊದಲು ಸದ್ದಳಕ್ಕೆ ಹೋಗಿದ್ದರೂ ಎನ್ನಲಾದ ಇನ್ನೊಬ್ಬ ತನಿಖಾಧಿಕಾರಿಯೂ ಬೀಗ ಮತ್ತು ಬಾಗಿಲು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿ . ಆ ಬಗ್ಗೆ ಯಾವುದೇ ಪಂಚನಾಮೆ ಆಗಿಲ್ಲ ಅಂದರೆ ಸರಿ .

ಪ್ರಕರಣದಲ್ಲಿನ ಆಸ್ತಿ ಹೊಸಪೇಟೆ ಪಟ್ಟಣದ ಹೃದಯ ಭಾಗದಲ್ಲಿದೆ ಅಂದರೆ ಸರಿ . ಸದರಿ ಆಸ್ತಿ ವಾಣಿಜ್ಯ ಕೇಂದ್ರಗಳ ಹತ್ತಿರವೇ ಇರುತ್ತದೆ ಅಂದರೆ ಸರಿ . ಮಲ್ಲಿಗೆ ಹೋಟಲ್ ಮುಂದೆ ಯಾವಾಗಲೂ 3-4 ಜನ ಸೆಕ್ಯೂರಿಟಿ ಗಾರ್ಡ್ ಇರುತ್ತಾರೆ ಅಂದರೆ ಸರಿ . ಸದರಿ ಜಾಗದ ಸುತ್ತಮುತ್ತಲೂ ಕ್ಯಾಮೆರಾಗಳು ಇರುತ್ತವೆ ಅಂದರೆ ನಾನು ನೋಡಿಲ್ಲ. ಸದರಿ ಸ್ಥಳ ಜನನಿಬಿಡ ಪ್ರದೇಶ ಅಂದರೆ ಸಾಮಾನ್ಯವಾಗಿ ಸರಿ .

ಕಳ್ಳತನ ದಿಃ 14-01-2017 ರಂದು ಮದ್ಯಾಹ್ನ ಸುಮಾರು 1.00 ಗಂಟೆಗೆ ಆಗಿರುತ್ತದೆ. ನಾನು ಅಕ್ಕಪಕ್ಕದ ಜನರನ್ನು ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಯಾವುದೇ ಪ್ರತ್ಯಕ್ಷ ಸಾಕ್ಷಿಯನ್ನು ವಿಚಾರಿಸಿ ಹೇಳಿಕೆ ಪಡೆದಿರುವುದಿಲ್ಲ. ದೂರು ನೀಡಲು 16 ದಿನಗಳು ತಡ ಆಗಿರುತ್ತದೆ ಅಂದರೆ ಸರಿ . ಚಾಸಾ -1 ರವರು ಮೊದಲು ನೇರ ಅರ್ಜಿಯನ್ನು ಠಾಣೆಯಲ್ಲಿ ನೀಡಿ ನಂತರ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ತಡವಾಗಿ ಬಂದು ದೂರು ನೀಡಿರುತ್ತಾರೆ. ನೇರ ಅರ್ಜಿಯನ್ನು ಚಾಸಾ -1 ರವರ ತಾಯಿ ಅನುರಾಧ ರವರು ದಿಃ 16-01-2017 ರಂದು ಕೊಟ್ಟಿದ್ದರು. ಸದರಿ ನೇರ ಅರ್ಜಿಯಲ್ಲಿ 1 ನೇ ಆರೋಪಿ ಅರ್ಜಿದಾರರ ಸಾಮಾನುಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ದೂರಿದ್ದರು. ಸದರಿ ನೇರ ಅರ್ಜಿಯಲ್ಲಿ 1 ನೇ ಆರೋಪಿಯನ್ನು ಕರೆಯಿಸಿ ಸಾಮಾನುಗಳನ್ನು ವಾಪಸ್ ಕೊಡಿಸಿ ಎಂದು ಬರೆದಿದ್ದರಿಂದ ಅದನ್ನು ಎ.ಎಸ್.ಐ ರವರು ಪ್ರಥಮ ವರ್ತಮಾನ ವರದಿಯಾಗಿ ದಾಖಲು ಮಾಡಿರಲಿಲ್ಲ. ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದರಿಂದ ಪ್ರಥಮ ವರ್ತಮಾನ ವರದಿ ದಾಖಲಾಗಲಿಲ್ಲ. ಸಾಕ್ಷಿ ಮುಂದುವರೆದು ನಮಗೆ ನೇರವಾಗಿ ದೂರು ಬಂದಿದ್ದರಿಂದ ಎಫ್.ಐ.ಆರ್ ದಾಖಲಾಗಿದೆ ಎಂದು ನುಡಿಯುತ್ತಾರೆ. ಒಂದೇ ಘಟನೆಗೆ ಸಂಬಂಧಿಸಿ ಠಾಣೆಯಲ್ಲಿ ಸ್ವೀಕೃತವಾದ 2 ನೇ ದೂರು ಈ ಪ್ರಕರಣದಲ್ಲಿ ಇರುತ್ತದೆ ಅಂದರೆ ಸರಿ .

ಚಾಸಾ -1 ರವರ 3 ಮರು ಹೇಳಿಕೆಗಳನ್ನು ಪಡೆದಿರುತ್ತೇನೆ ಅಂದರೆ ಸರಿ . ದಿಃ 17-05-2017 ರಂದು ಕಳ್ಳತನ ಆಗಿದ್ದ ಸಾಮಾನುಗಳ ಬೆಲೆ ರೂ. 45,00,000/- ಅಲ್ಲ ಸುಮಾರು 6,69,500/- ಇರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ ಅಂದರೆ ಸರಿ . ಉಳಿದ ಸಾಮಾನುಗಳೆಲ್ಲಾ ಅಂಗಡಿಯಲ್ಲಿ ಇದೆ ಎಂದು ನಮೂದು ಆಗಿದೆ

ಅಂದರೆ ಸರಿ . ಉಳಿದ ಸಾಮಾನುಗಳು ಯಾವುವು ಮತ್ತು ಅಂಗಡಿಯ ಯಾವ ಭಾಗದಲ್ಲಿ ಇದ್ದವು ಎಂದು ನಾನು ತನಿಖೆ ಮಾಡಿರುವುದಿಲ್ಲ.

ಪ್ರಕರಣದಲ್ಲಿನ ಫೋಟೋಗಳನ್ನು ಸಿಬ್ಬಂದಿ ತೆಗೆದಿರುತ್ತಾರೆ ಅವರ ಹೆಸರು ನನಗೆ ನೆನಪಿಲ್ಲ. ಸದರಿ ಫೋಟೋಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಸಿಬ್ಬಂದಿಗಳಿಂದ ಪಡೆದು ಸಲ್ಲಿಸಿಲ್ಲ ಅಂದರೆ ಸರಿ . 2 ಮತ್ತು 3 ನೇ ಆರೋಪಿತರು ಕಾರು ಮತ್ತು ಲಾರಿಗಳ ಮೆಕಾನಿಕ್ ಗಳು ಮತ್ತು ಅವರ ಗ್ಯಾರೇಜ್ ಇರುತ್ತದೆ ಅಂದರೆ ಸರಿ . ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿಯೂ ಫ್ರಿಜ್, ಟೇಬಲ್, ಅಲ್ಮೇರಾ, ಏರ್ ಕೂಲರ್ ಇರುತ್ತವೆ ಅಂದರೆ ಸರಿ . ಆರೋಪಿತರ ಮನೆಗಳಲ್ಲಿನ ಫ್ರಿಜ್, ಟೇಬಲ್, ಅಲ್ಮೇರಾ, ಏರ್ ಕೂಲರ್ ಜಪ್ತು ಮಾಡಿ ಸುಳ್ಳು ಕಳ್ಳತನದ ಪ್ರಕರಣವನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ.

2 ಮತ್ತ 3 ನೇ ಆರೋಪಿತರ ಗ್ಯಾರೇಜ್ಗಳಿಗೆ ಹೋಗಿ ಅವರಿಗೆ ಸಂಬಂಧಿಸಿದ ಸಾಮಾಗ್ರಿಗಳನ್ನು ಜಪ್ತು ಮಾಡಿ ಅವುಗಳು ಚಾಸಾ -1 ರವರಿಗೆ ಸಂಬಧಿಸಿದ ಸಾಮಾಗ್ರಿಗಳು ಎಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ.

ನಾವು ಕಳ್ಳತನ ಆಗಿದೆ ಎಂದು ಹೇಳಿರುವ ಜಾಗವನ್ನು 1 ನೇ ಆರೋಪಿ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿಸಿದ್ದು, ಅದಕ್ಕೆ ಆತನೇ ಮಾಲೀಕ ಇರುತ್ತಾನೆ ಅಂಂರೆ ಸರಿಯಲ್ಲ. ಪ್ರಕರಣದ ಪಿರ್ಯಾದುದಾರರು 1 ನೇ ಆರೋಪಿಗೆ ತೊಂದರೆ ನೀಡಿದ್ದರಿಂದಲೇ ಆತ ಚಾಸಾ -1 ರವರ ವಿರುದ್ದ ಅಸಲು ದಾವೆ ಸಂಖ್ಯೆ 338/2016 ರಲ್ಲಿ ಪ್ರಕರಣ ದಾಖಲಿಸಿ ಆಕೆಯ ವಿರುದ್ದ ಆದೇಶವನ್ನು ಪಡೆದಿದ್ದ ಅಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಪರವಾಗಿ ಸದರಿ ದಾವೆಯಲ್ಲಿ ಡಿಕ್ರಿ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಮಾಹಿತಿ ನಮಗೆ ಇದ್ದಿದ್ದರಿಂದಲೇ ನೇರ ಅರ್ಜಿಯ ಆಧಾರದ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ ಅಂದರೆ ಸರಿಯಲ್ಲ. ಚಾಸಾ -1 ರವರಿಗಾಗಲೀ ಆಕೆಯ ತಾಯಿಗಾಗಲೀ ಘಟನೆ ಆಯಿತು

ಎನ್ನಲಾದ ದಿನದಂದು ಆಸ್ತಿಯ ಮೇಲೆ ಮಾಲಿಕತ್ವ ಮತ್ತು ಸ್ವಾದೀನ ಇಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಅಂತಮ ವರದಿ ಸಲ್ಲಿಸಿರುತೆತೇನೆ ಅಂದರೆ ಸರಿಯಲ್ಲ. ನಾನು ಯಾವುದೇ ಆರೋಪಿಯಿಂದ ಮತ್ತು ಸಾಕ್ಷಿದಾರರಿಂದ ಹೇಳಿಕೆಗಳನ್ನು ಪಡೆದಿಲ್ಲ, ಪಂಚರ ಸಮಕ್ಷಮ ಯಾವುದೇ ಪಂಚನಾಮೇಯನ್ನು ಮಾಡಿಲ್ಲ ಮತ್ತು ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿಯೇ ಕುಳಿತು ಸೃಷ್ಟಿ ಮಾಡಿರುತ್ತೇವೆ ಅಂದರೆ ಸರಿಯಲ್ಲ.  ಬ್ಯಾಂಕಿನಿಂದ ಸಾಲ ಪಡೆದು, ಪಡೆದಿದ್ದ ಸಾಲವನ್ನು ಮುಳುಗಿಸಬೇಕು ಎಂಬ ದುರುದ್ದೇಶದಿಂದ ಚಾಸಾ -1 ವರು ಸುಳ್ಳು ಘಟನೆಯನ್ನು ಹೇಳಿ ದೂರನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ. ಚಾಸಾ -1 ರವರು ವರಿಷ್ಠಾಧಿಕಾರಿಗಳು ಮತ್ತು ಮಾಧ್ಯಮದವರ ಮುಂದೆ ನಮ್ಮ ವಿರುದ್ದ ಹೇಳಿಕೆಗಳನ್ನು ನೀಡುತ್ತಾರೆ ಎಂಬ ಕಾರಣದಿಂದ ಆಕೆ ನೀಡಿದ ಸುಳ್ಳು ದೂರನ್ನು ಸ್ವೀಕರಿಸಿ, ಸುಳ್ಳು ತನಿಖೆ ಮಾಡಿ, ಸುಳ್ಳು ಅಂತಿಮ ವರದಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಎಲ್ಲಾ ಮಾಹಿಸಿ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.